ಡಾ॥ ಎಂ.ಪಿ. ಕರ್ಕಿ : ಅವರಿಗೆ ಗೊತ್ತಿದೆ ಎಂದು ಹೇಳುವುದು ಸಾಕಾಗುವುದಿಲ್ಲ. ನಮಗೂ ಕೂಡ, ಸದನಕ್ಕೆ ಗೊತ್ತಾಗಬೇಕಾಗುತ್ತದೆ. ಆದ್ದರಿಂದ ಅದಕ್ಕೆ ಉತ್ತರ ಕೊಡಬೇಕೆಂದು ಮಾನ್ಯ ಮಂತ್ರಿಯವರಿಗೆ ಕೇಳಿಕೊಳ್ಳುತ್ತೇನೆ.

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ : ಮಾನ್ಯ ಅಧ್ಯಕ್ಷರೆ, ಹಿಂದೆ 1983-84ರಲ್ಲಿ ಎಷ್ಟು ಹಣವನ್ನು ಒದಗಿಸಿದ್ದೀರಿ ಎಂದು ಕೇಳಿದ್ದಾರೆ. ಅದು 2,53,409 ರೂಪಾಯಿ ಖರ್ಚು ಮಾಡಿ ಹಿಂದೆ ಹೂಳು ಎತ್ತಿದ್ದಾರೆ. ಈಗ 75 ಲಕ್ಷ ರೂಪಾಯಿಗಳನ್ನು ಒದಗಿಸಲಾಗಿದೆ.

ಶ್ರೀ ಡಾ॥ ಯು. ಚಿತ್ತರಂಜನ್ : ಈ ಭಟ್ಕಳ ಬಂದರು ಮತ್ತು ಕಾಸರಗೋಡು ಬಂದರು ಬಿಟ್ಟು ಉತ್ತರ ಕನ್ನಡ ಜಿಲ್ಲೆಯಲ್ಲಿ ಮತ್ತು ದಕ್ಷಿಣ ಕನ್ನಡ ಜಿಲ್ಲೆಯಲ್ಲೂ ಕೂಡ ಎಲ್ಲಾ ಬಂದರುಗಳಲ್ಲಿ ಹೂಳು ತುಂಬಿದೆ ಎಂದು ಮಾನ್ಯ ಮಂತ್ರಿಗಳೇ ಮೊನ್ನೆ ಉತ್ತರ ಕೊಟ್ಟಿದ್ದಾರೆ. ಅದರಲ್ಲಿಯೂ ಬೆಳ್ಳಕೆರೆಯಲ್ಲಿ ಒಳಗೆ ಬರಲಿಕ್ಕೆ ಸಾಧ್ಯ ಇಲ್ಲ ಎನ್ನುವಂತಹ ಒಂದು ಉತ್ತರವನ್ನು ಮಾನ್ಯ ಮಂತ್ರಿಗಳು ಕೊಟ್ಟಿದ್ದಾರೆ. ಆದರೆ ಆ ಬಜೆಟರಿ ಪ್ರಾವಿಷನ್‌ನಲ್ಲಿ ಅದಕ್ಕೆ ಏನೇ ಹಣವನ್ನು ಒದಗಿಸಿದ್ದುದು ನಮಗೆ ಕಾಣುತ್ತಾ ಇಲ್ಲ. ಹಾಗಾಗಿ ಮೀನುಗಾರಿಕಾ ಮಂತ್ರಿಗಳು ಇದನ್ನು ಹೇಗೆ ನಿರ್ವಹಿಸುತ್ತಾರೆ? ಬಜೆಟಿನಲ್ಲಿ ಹಣ ಒದಗಿಸಿದ್ದು ಎಲ್ಲಿಯೂ ಕಾಣುತ್ತಾ ಇಲ್ಲ. ಇದನ್ನು ಯಾವ ರೀತಿ ನಿರ್ವಹಿಸುತ್ತಾ ಇದ್ದೀರಿ?

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ : ಮಾನ್ಯ ಅಧ್ಯಕ್ಷರೆ, ಈ ಪ್ರದೇಶಗಳಿಗೆಲ್ಲಾ ನಾನೇ ಸ್ವತಃ ಭೇಟಿ ಕೊಟ್ಟು ನೋಡಿದ್ದೇನೆ. ಬಜೆಟ್ ಪ್ರಾವಿಷನ್ 20 ಲಕ್ಷ ರೂಪಾಯಿಗಳನ್ನು ಒದಗಿಸಲಾಗಿದೆ. ಈಗಾಗಲೇ ಇದರ ಬಗ್ಗೆ ಬೆಳ್ಳಕೆರೆಯಲ್ಲಿ ಸಹ ನಾನು ನೋಡಿದ್ದೇನೆ. ಅಗತ್ಯವಾಗಿ ಆ ಕೆಲಸ ಆಗಬೇಕಾಗುತ್ತದೆ. ಅದರ ಬಗ್ಗೆ ನಾನು ಸರ್ವೆ ಮಾಡಿಸಿ ಕಾರ್ಯಕ್ರಮವನ್ನು ಕೈಗೊಳ್ಳುತ್ತೇನೆ.

ಕಡೂರು ತಾಲ್ಲೂಕಿನಲ್ಲಿ ರಾಜ್ಯ ಹೆದ್ದಾರಿ ರಸ್ತೆಗಳ ಅಗಲವನ್ನು ಹೆಚ್ಚಿಸುವುದು

913 - ಶ್ರೀ ಕೆ.ಎಂ. ಕೃಷ್ಣಮೂರ್ತಿ (ಕಡೂರು) : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕಡೂರು ತಾಲ್ಲೂಕಿನಲ್ಲಿ ರಾಜ್ಯ ಹೆದ್ದಾರಿ ಎಷ್ಟು ಕಿ.ಮೀ. ಇದೆ, ರಸ್ತೆಯ ಅಗಲವೆಷ್ಟು?

ಆ) ಮುಂದಿನ ವರ್ಷ ರಸ್ತೆಯ ಅಪಘಾತವನ್ನು ತಪ್ಪಿಸಲು ಎಷ್ಟು ಕಿ.ಮೀ. ರಸ್ತೆಯ ಅಗಲವನ್ನು ಮಾಡಲಾಗುವುದೇ?

ಇ) ತಾಲ್ಲೂಕಿನಲ್ಲಿ ಎಂ.ಡಿ.ಆರ್. ಎಷ್ಟು ಕಿ.ಮೀ. ಇದೆ, ಇದರಲ್ಲಿ ಎಷ್ಟು ಕಿ.ಮೀ. ಡಾಂಬರೀಕರಣವಾಗಿದೆ?

ಶ್ರೀ ಶಿವಾನಂದ ಪೆಚ್. ಕೌಜಲಗಿ (ಲೋಕೋಪಯೋಗಿ ಸಚಿವರು):

ಅ) ಕಡೂರು ತಾಲ್ಲೂಕಿನಲ್ಲಿ 2 ರಾಜ್ಯ ಹೆದ್ದಾರಿಗಳು ಹಾದು ಹೋಗುತ್ತಿದ್ದು, ಇದರ ಒಟ್ಟು ಉದ್ದ ಕಡೂರು ತಾಲ್ಲೂಕಿಗೆ ಸಂಬಂಧಿಸಿದಂತೆ 50 ಕಿ.ಮೀ. ಗಳಾಗಿರುತ್ತದೆ. ಅವುಗಳ ವಿವರ ಕೆಳಕಂಡಂತಿದೆ

1. ಕಡೂರು ಬಂಟ್ವಾಳವನ್ನು ಚಿಕ್ಕಮಗಳೂರು ಮೂಡಿಗೆರೆ ಬೆಳ್ತಂಗಡಿ ಮಾರ್ಗವಾಗಿ ಸೇರುವ ರಾಜ್ಯ ಹೆದ್ದಾರಿ (20 ಕಿ.ಮೀ. ಉದ್ದ)
2. ತುಮಕೂರು ಹೊನ್ನಾವರವನ್ನು ತಿಪಟೂರು, ಗುಬ್ಬಿ, ಕಡೂರು ಮಾರ್ಗವಾಗಿ ಸೇರುವ ರಾಜ್ಯ ಹೆದ್ದಾರಿ (30 ಕಿ.ಮೀ.)

ಈ ಮೇಲಿನ ಎರಡು ರಸ್ತೆಗಳು ಮಧ್ಯಮ ಪಥ (ಇಂಟರ್ ಮಿಡಿಯಟ್ ಲೇನ್) ರಸ್ತೆಯಾಗಿದ್ದು, ಡಾಂಬರು ಹಾಕಿರುವ ಅಗಲ 5.50 ಮೀಟರ್‌ಗಳಾಗಿರುತ್ತದೆ.

ಆ) ಹೆಚ್ಚಿನ ವಾಹನ ಸಾಂದ್ರತೆಯನ್ನು ಅನುಸರಿಸಿ ಅಂತಹ ರಸ್ತೆಯ ಭಾಗಗಳನ್ನು 7.5 ಮೀಟರ್ ಅಗಲಕ್ಕೆ ದ್ವಿಪಥ ರಸ್ತೆಯನ್ನಾಗಿ ಮಾಡುವುದನ್ನು ಪ್ರಸ್ತಾಪಿಸಲಾಗಿದೆ. 1995-96ರ ಸಾಲಿನಲ್ಲಿ ಆದ್ಯತೆಪಡಿಸಿದ ರಸ್ತೆಯಾಗಿ ತುಮಕೂರು - ಹೊನ್ನಾವರ ರಸ್ತೆ ಆಯ್ದ ಭಾಗಗಳ ಅಭಿವೃದ್ಧಿಯನ್ನು ಹಮ್ಮಿಕೊಳ್ಳಲಾಗಿದೆ.

ಇ) ಕಡೂರು ತಾಲ್ಲೂಕಿನಲ್ಲಿ ಎಂ.ಡಿ.ಆರ್. ಒಟ್ಟು ಉದ್ದವು 296 ಕಿ.ಮೀ.ಗಳಾಗಿದ್ದು, ಇದರ ಪೈಕಿ 165 ಕಿ.ಮೀ. ಉದ್ದವು ಡಾಂಬರೀಕರಣವಾಗಿರುತ್ತದೆ.

ಶ್ರೀ ಕೆ.ಎಂ. ಕೃಷ್ಣಮೂರ್ತಿ : ಈ 50 ಕಿ.ಮೀ. ಏನು ನಮ್ಮ ಕಡೂರು ತಾಲ್ಲೂಕಿನಲ್ಲಿ ರಾಜ್ಯದ ಹೆದ್ದಾರಿ ಹೋಗಿದೆ ಸ್ವಾತಂತ್ರ್ಯ ಬಂದು 40 ವರ್ಷಗಳು ಕಳೆದರೂ ಕೂಡ ಅದರ ಅಗಲ ಜಾಸ್ತಿ ಆಗಿಲ್ಲ. ಆವತ್ತಿನ ವಾಹನ ಸಂಚಾರಕ್ಕೆ ಆ ರಸ್ತೆ ಯೋಗ್ಯವಾಗಿತ್ತು. ಇವತ್ತು ಏನಾಗಿದೆ ಅಂದರೆ ವಾಹನಗಳ ಸಂಚಾರ ಜಾಸ್ತಿ ಆಗಿದೆ. ಅದು ರಾಜ್ಯದ ಹೆದ್ದಾರಿಯಾದರೂ ಕೂಡ ಯಾವುದೇ ರಾಷ್ಟ್ರೀಯ ಹೆದ್ದಾರಿಗಿಂತ ಕಡಿಮೆ ಇಲ್ಲ.

ಅಧ್ಯಕ್ಷರು : ಕೃಷ್ಣಮೂರ್ತಿಯವರೇ, ಪ್ರಶ್ನೋತ್ತರ ವೇಳೆಯಲ್ಲಿ ಭಾಷಣ ಮಾಡುವ ಹಾಗಿಲ್ಲ, ಉಪಪ್ರಶ್ನೆ ಕೇಳಿ.

ಶ್ರೀ ಕೆ.ಎಂ. ಕೃಷ್ಣಮೂರ್ತಿ : ಮುಂದಿನ ವರ್ಷ 1995-96ನೇ ಸಾಲಿನಲ್ಲಿ ಸಚಿವರು ಅದರ ಬಗ್ಗೆ ಏನಾದರೂ ರಸ್ತೆ ಅಗಲ ಮಾಡಲಿಕ್ಕೆ ಕ್ರಮವನ್ನು ಕೈಗೊಳ್ಳುತ್ತೀರಾ?

ಶ್ರೀ ಶಿವಾನಂದ ಹೆಚ್. ಕೌಜಲಗಿ : 1995-96ಕ್ಕೆ ಈ ಕೆಲಸಕ್ಕೆ 2 ಕೋಟಿ ರೂಪಾಯಿಗಳನ್ನು ಅಂದಾಜಿಗೆ ಮಂಜೂರಾತಿ ನೀಡಲಾಗಿದೆ. ಹಾಗೂ 1 ಕೋಟಿ ರೂಪಾಯಿಗಳನ್ನು ಇದೇ ವರ್ಷ ಅನುದಾನವನ್ನು ತೆಗೆದಿಡಲಾಗಿದೆ. 5.5 ಮೀಟರ್ ರಸ್ತೆ ಮಾಡಲಾಗುವುದು.

ಬೆಂಗಳೂರು - ದಕ್ಷಿಣ ಉತ್ತರ ತಾಲ್ಲೂಕು ಅಭಿವೃದ್ಧಿ ಮಂಡಳಿಯ ಅಭಿವೃದ್ಧಿ ಕಾಮಗಾರಿಗಳಲ್ಲಿ ಅವ್ಯವಹಾರಗಳು

752 - ಶ್ರೀ ಎಂ. ಶ್ರೀನಿವಾಸ (ಉತ್ತರಹಳ್ಳಿ) : ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂ. ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಂಗಳೂರು ದಕ್ಷಿಣ ತಾಲ್ಲೂಕು ಮತ್ತು ಉತ್ತರ ತಾಲ್ಲೂಕು ಅಭಿವೃದ್ಧಿ ಮಂಡಳಿ ವತಿಯಿಂದ 1990 ರಿಂದ 1994ರ ವರೆಗೆ ಕೈಗೊಂಡಿರುವ ವಿವಿಧ ಅಭಿವೃದ್ಧಿ ಕಾಮಗಾರಿಗಳ ಹೆಸರು, ಅಂದಾಜು ಮೊತ್ತ ಸಾಧಿಸಿದ ಪ್ರಗತಿಯ ವಿವರ ಒದಗಿಸುವುದು.

ಆ) ಈ ಅಭಿವೃದ್ಧಿ ಕಾಮಗಾರಿಗಳಲ್ಲಿ ಅವ್ಯವಹಾರಗಳು ನಡೆದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಇ) ಹಾಗಿದ್ದಲ್ಲಿ ಈ ಬಗ್ಗೆ ತೆಗೆದುಕೊಂಡ ಕ್ರಮಗಳೇನು?

ಶ್ರೀ ಎಂ.ಪಿ. ಪ್ರಕಾಶ್ (ಗ್ರಾಮೀಣಾಭಿವೃದ್ಧಿ ಮತ್ತು ಪಂ. ರಾಜ್ ಸಚಿವರು) :

ಅ) ಕಾಮಗಾರಿಗಳ ವಿವರದ ಪಟ್ಟಿಯನ್ನು ಲಗತ್ತಿಸಿದೆ.

ಆ) ಇಲ್ಲ

ಇ) ಉದ್ಭವಿಸುವುದಿಲ್ಲ.